O.S. ನಂಬರಃ 25/2021
ಡಿ. ಡಬ್ಲ್ಯೂಃ 1

ದಿಃ 19-02-2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟಿ ಸವಾಲುಃ 5ನೇ ಪ್ರತಿವಾದಿಯ ಪರ ವಕೀಲರಾದ ಶ್ರೀ ವಿ.ವಿ.ಎಸ್ ಇವರಿಂದಃ

ಉದಾಹರಣೆ ಹಾಗೂ ಪ್ರಮಾಣ ಪತ್ರವನ್ನು ಸಲ್ಲಿಸಲು ವಕೀಲರಿಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದರೆ ನಾನೇ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ವಕೀಲರು ಯಾರು ಎಂದರೆ ಸಾಕ್ಷಿಯು ಮರೆತುಹೋಗಿರುತ್ತದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿಯು ನನ್ನ ದೊಡ್ಡಮ್ಮನ ಮಗಳು ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿಯು ಈ ಪ್ರಕರಣದಲ್ಲಿ ಯಶಸ್ವಿಯಾದರೆ ನಿಮಗೂ ಸಹ ಪಾಲು ಬರುತ್ತದೆ ಎಂದು ತಿಳಿದುಕೊಂಡಿರುತ್ತೀರಿ ಎಂದರೆ ಸಾಕ್ಷಿಯು ಅದಕ್ಕೆ ಹಾಗೂ ನನ್ನ ಪಾಲಿಗೆ ಯಾವುದೇ ಸಂಬಂಧವಿರುವುದಿಲ್ಲ ಎಂದು ನುಡಿಯುತ್ತಾರೆ. ನಿನ್ನ ತಾಯಿಯ ಹೆಸರು ಕಲ್ಯಾಣಿ ಆಗಿರುತ್ತದೆ. ಕಾಮಣ್ಣನ ಹೆಂಡತಿಯ ಹೆಸರು ಗೊತ್ತಾ ಎಂದರೆ ಸಾಕ್ಷಿಯು ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಕಾಮಣ್ಣ ಇವರ ತಂದೆ ಮತ್ತು ತಾಯಿಯ ಪೂರ್ಣ ಹೆಸರು ಹೇಳಲು ಬರುತ್ತಾ ಎಂದರೆ ಸಾಕ್ಷಿಯು ಆಗ ನಾನು ಚಿಕ್ಕವನಿದ್ದೆ ಎಂದು ನುಡಿಯುತ್ತಾರೆ. ಯಮುನಾ ಇವರ ಗಂಡನ ಹೆಸರು ಏನು ಎಂದರೆ ದಾಮು ರಾಮು ನಾಯ್ಕ ಇರಬೇಕು ಎಂದು ನುಡಿಯುತ್ತಾರೆ. ಯಮುನಾ ಇವರಿಗೆ ಎಷ್ಟು

ಮಕ್ಕಳು ಎಂದರೆ ಸಾಕ್ಷಿಯು ಒಟ್ಟು 6 ಜನ ಮಕ್ಕಳು ಎಂದು ನುಡಿಯುತ್ತಾರೆ. ಅವರ ಮಕ್ಕಳಲ್ಲಿ ಯಾರು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಯು ಒಬ್ಬರು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ತೀರಿಕೊಂಡವರ ಹೆಸರು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ಗಿರಿಜಾ ಕೋಂ ದಾಮೋದರ ನಾಯ್ಕ ಇವರು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಗಿರಿಜಾಗೆ ಎಷ್ಟು ಜನ ಮಕ್ಕಳು ಎಂದರೆ ಇಬ್ಬರು ಗಂಡುಮಕ್ಕಳು ಎಂದು ನುಡಿಯುತ್ತಾರೆ.

2. ದಾವಾ ಆಸ್ತಿಗಳ ಸರ್ವೆ ನಂಬರು ಹೇಳಲು ಬರುತ್ತಾ ಎಂದರೆ ಸಾಕ್ಷಿಯು 2-3 ಗೊತ್ತಿರುತ್ತವೆ ಎಂದು ನುಡಿಯುತ್ತಾರೆ. ಹೇಳಲು ಆಗುತ್ತಾ ಎಂದರೆ ಸಾಕ್ಷಿಯು ಸರ್ವೆ ನಂ.31, 35 ಮತ್ತು 36 ಇರಬಹುದು. ಯಾವ ಗ್ರಾಮ ಹಾಗೂ ಯಾವ ಹೋಬಳಿಯಲ್ಲಿ ಇರುತ್ತವೆ ಎಂದರೆ ಸಾಕ್ಷಿಯು ಬೊಬ್ರುವಾಡಾ ಗ್ರಾಮ ಹೋಬಳಿ ನೆನಪಿರುವುದಿಲ್ಲ. ನೀವು ಹೇಳಿದ ಸರ್ವೆ ನಂಬರುಗಳ ಕ್ಷೇತ್ರ ಹೇಳಲು ಆಗುತ್ತಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ತೋರಿಸಲು ಏನಾದರೂ ದಾಖಲಾತಿಗಳು ಇರುತ್ತವೆಯಾ ಎಂದರೆ ಸಾಕ್ಷಿಯು ವಕೀಲರಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ. ಕಲ್ಯಾಣಿಯಾಗಲಿ ಅಥವಾ ಯುಮುನಾ ಆಗಲಿ ಇವರು ಕಾಮಣ್ಣನ ಮಕ್ಕಳು ಎಂದು ತೋರಿಸಲು ದಾಖಲಾತಿಗಳು ಇವೆಯಾ ಎಂದರೆ ಸಾಕ್ಷಿಯು ವಕೀಲರ ಹತ್ತಿರ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿಮ್ಮ ತಾಯಿ ಕಲ್ಯಾಣಿ ಇವರು ಶಾಲೆಗೆ ಹೋಗಿರುತ್ತಾರಾ ಎಂದರೆ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ತಾಯಿಗೆ

ಸೇರಿದ ರೇಷನ್ ಕಾರ್ಡ, ಚುನಾವಣಾ ಚೀಟಿ ಇವೆಯಾ ಎಂದರೆ ಹೌದು ಎಂದು ನುಡಿಯುತ್ತಾರೆ. ಅವುಗಳಲ್ಲಿ ತಂದೆಯ ಹೆಸರು ಎಲ್ಲವನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿ. ಅದನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನಿಮಗೆ ಯಾವುದೇ ಸಮಸ್ಯೆ ಇರುವುದಿಲ್ಲ ಎಂದರೆ ಸರಿ. ಚುಡಿಯಾ ಇವರಿಗೆ ಎಷ್ಟು ಮಕ್ಕಳು ಎಂದು ಹೇಳಲು ಆಗುತ್ತಾ ಎಂದರೆ ಸಾಕ್ಷಿಯು 3 ಗಂಡು ಮಕ್ಕಳು ಹಾಗೂ ಒಬ್ಬಳು ಹೆಣ್ಣು ಮಗಳು ಇರುತ್ತಾರೆ ಎಂದು ನುಡಿಯುತ್ತಾರೆ. ಅವರ ಹೆಸರು ಏನು ಎಂದರೆ ಸಾಕ್ಷಿಯು ವಿನೋದಾ ಚುಡಿಯಾ ನಾಯ್ಕ, ಸುಧಾ ಚುಡಿಯಾ ನಾಯ್ಕ ಮತ್ತು ಉಳಿದವರ ಹೆಸರು ಮರೆತುಹೋಗಿರುತ್ತದೆ. ದಾವಾ ಆಸ್ತಿಗಳನ್ನು ಚುಡಿಯಾ ನಾಯ್ಕ ಇವರು ಮಾಡಿಕೊಂಡು ಬಂದಿರುತ್ತಾರೆ ಎಂದರೆ ಸಾಕ್ಷಿಯು ನಾವೆಲ್ಲರೂ ಸೇರಿ ಮಾಡಿಕೊಂಡು ಬಂದಿರುತ್ತೇವೆ ಎಂದು ನುಡಿಯುತ್ತಾರೆ. ಯಾವಾಗ ಎಲ್ಲರೂ ಸೇರಿ ಮಾಡಿಕೊಂಡು ಬಂದಿರುತ್ತೀರಿ ಎಂದರೆ ಸಾಕ್ಷಿಯು ಸುಮಾರು 50 ವರ್ಷಗಳಿಂದ ಮಾಡಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಎಷ್ಟು ಜನ ಅಕ್ಕ ಹಾಗೂ ತಮ್ಮಂದಿರು ಎಂದರೆ ಸಾಕ್ಷಿಯು 4 ಜನ ಎಂದು ನುಡಿಯುತ್ತಾರೆ. ನಿಮ್ಮಲ್ಲಿ ದೊಡ್ಡವರು ಯಾರು ಎಂದರೆ ಸಾಕ್ಷಿಯು ನಾನೇ ಎಂದು ನುಡಿಯುತ್ತಾರೆ. ನೀವು ಶಾಲೆಗೆ ಹೋಗಿರುತ್ತೀರಾ ಎಂದರೆ ಹೋಗಿರುತ್ತೇನೆ ಎಂದು ನುಡಿಯುತ್ತಾರೆ. ಬಾಕಿಯವರು ಸಹ ಶಾಲೆಗೆ ಹೋಗಿರುತ್ತಾರೆ ಎಂದರೆ ಸರಿ. ಶಾಲಾ ದಾಖಲಾತಿಗಳಲ್ಲಿಯೂ ಸಹ ತಂದೆ ಹಾಗೂ ತಾಯಿ ಹೆಸರು ನಮೂದು ಮಾಡಿರುತ್ತಾರೆ ಎಂದರೆ ಸರಿ. ನೀವು 50 ವರ್ಷಗಳಿಂದ ನೀವೆಲ್ಲ ಸೇರಿಕೊಂಡು ದಾವಾ ಜಮೀನುಗಳನ್ನು ಸಾಗುವಳಿ ಮಾಡಿಕೊಂಡು ಬಂದಿರುತ್ತೀರಿ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ

ಸರಿಯಲ್ಲ. ದಾವಾ ಆಸ್ತಿಗಳನ್ನು ಚುಡಿಯಾ ಇವರೇ ಸಾಗು ಮಾಡಿಕೊಂಡು ಬರುತ್ತಿದ್ದರು ಎಂದರೆ ಸಾಕ್ಷಿಯು ನಾವೆಲ್ಲ ಸೇರಿಕೊಂಡು ಮಾಡುತ್ತಿದ್ದೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟು ಚುಡಿಯಾ ಇವರ ಹೆಸರು ದಾಖಲಾತಿಗಳಲ್ಲಿ ಯಾವ ರೀತಿಯಾಗಿ ಬಂದಿರುತ್ತದೆ ಎಂದು ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ಅಜ್ಜ ಮರಣಪಟ್ಟ ನಂತರ ಆತನ ಹೆಸರಿಗೆ ಆಗಿರುತ್ತವೆ ಎಂದು ನುಡಿಯುತ್ತಾರೆ. ಈ ವಿಷಯ ನಿಮಗೆ ಯಾವಾಗ ಗೊತ್ತಾಗಿರುತ್ತದೆ ಎಂದರೆ ಸಾಕ್ಷಿಯು 2 ವರ್ಷಗಳ ಹಿಂದೆ ಗೊತ್ತಾಗಿರುತ್ತದೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಮನೆ ಏನಾದರೂ ಇದೆಯಾ ಎಂದರೆ ಸಾಕ್ಷಿಯು ಮುಂಚೆ ಇದ್ದು, ಈಗ ಕೊಚ್ಚಿ ಹೋಗಿರುತ್ತದೆ ಎಂದು ನುಡಿಯುತ್ತಾರೆ. 5ನೇ ಪ್ರತಿವಾದಿಯು ಯಾವ ಮನೆಯಲ್ಲಿ ವಾಸ್ತವ್ಯ ಮಾಡಿಕೊಂಡು ಬರುತ್ತಿದ್ದಾರೆ ಎಂದು ಹೇಳಲು ಬರುತ್ತಾ ಎಂದರೆ ಸಾಕ್ಷಿಯು ನಾವಿದ್ದ ಹಳೆ ಮನೆಯಲ್ಲಿ ಇರಲಿಲ್ಲ, ಹೊಸ ಮನೆಯಲ್ಲಿ ವಾಸ್ತವ್ಯ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಹೊಸಮನೆಯನ್ನು ಯಾರು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ಎಲ್ಲರೂ ಸೇರಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಮನೆ ಯಾರ ಹೆಸರಿಗೆ ಇದೆ ಎಂದರೆ ಸಾಕ್ಷಿಯು ಚುಡಿಯಾ ಇವರ ಹೆಸರಿಗೆ ಇರುತ್ತದೆ ಎಂದು ನುಡಿಯುತ್ತಾರೆ. ಮನೆಯು ಚುಡಿಯಾ ಹೆಸರಿಗೆ ಇದ್ದು, ಅದರಲ್ಲಿಯೂ ನಮಗೆ ಪಾಲು ಬೇಕು ಎಂದು ನೀವು ನಿಮ್ಮ ಉದಾಹರಣೆಯಲ್ಲಿ ಕೇಳಿರುವುದಿಲ್ಲ ಎಂದರೆ ಸಾಕ್ಷಿಯು ಕೇಳಿರುತ್ತೇವೆ ಎಂದು ನುಡಿಯುತ್ತಾರೆ. ನೀವು ಮನೆಗೆ ಸಹಾಯ ಮಾಡಿದೇನು ಎನ್ನುವುದಕ್ಕೆ ಏನಾದರೂ ದಾಖಲಾತಿಗಳು ಇವೆಯಾ ಎಂದರೆ ಸಾಕ್ಷಿಯು ವಕೀಲರಿಗೆ ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ.

3. ಜಮೀನುಗಳು ಪಿತ್ರಾರ್ಜಿತ ಆಸ್ತಿಗಳು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಸದರಿ ಆಸ್ತಿಗಳೆಲ್ಲವೂ ಸಹ ಚುಡಿಯಾ ನಾಯ್ಕು ಇವರು ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಕಾಮಣ್ಣ ಗೇಣಿನಾತೆಯನ್ನು ಮಧ್ಯದಲ್ಲಿ ನಿಲ್ಲಿಸಿದ್ದು, ಅದನ್ನು ಚುಡಿಯಾ ಇವರು ಮುಂದುವರೆಸಿರುತ್ತಾರೆ ಎಂದರೆ ಸರಿಯಲ್ಲ. ಚುಡಿಯಾ ಇವರು ಸ್ವತಂತ್ರ ನಾತೆಯಿಂದ ಭೂ–ನ್ಯಾಯಮಂಡಳಿಗೆ ಅರ್ಜಿ ಸಲ್ಲಿಸಿ, ಅವರಿಗೆ ಮಂಜೂರಾದ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಕಾಮಣ್ಣ ಹಾಗೂ ಯಮುನಾ ಮತ್ತು ಕಲ್ಯಾಣಿ ಇವರಿಗೆ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸಾಕ್ಷಿಯು ಕಾಮಣ್ಣ ನಮ್ಮ ಅಜ್ಜನಾಗಬೇಕು ಎಂದು ನುಡಿಯುತ್ತಾರೆ. ಕಾಮಣ್ಣ ಇವರಿಗೆ ಕಲ್ಯಾಣಿ ಮತ್ತು ಯಮುನಾ ಇವರು ಯಾವುದೇ ಸಂಬಂಧವಿಲ್ಲದ ಕಾರಣ ನೀವು ಅವರು ಸಂಬಂಧವಾಗಬೇಕು ಎಂದು ತೋರಿಸಲು ಯಾವುದೇ ಕಾಗದಪತ್ರಗಳನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿಯಲ್ಲ. ನೀವು ವಾದಿಯರು ಮತ್ತು 2 ರಿಂದ 4 ನೇ ಪ್ರತಿವಾದಿಯರ ಜೊತೆಗೆ ಸೇರಿಕೊಂಡು ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೀರಿ ಎಂದರೆ ಸರಿಯಲ್ಲ. ಸುಳ್ಳು ಪ್ರಕರಣಕ್ಕೆ ನೀವು ವಾದಿಯರಿಗೆ ಸಹಾಯ ಮಾಡಲೆಂದು ಸುಳ್ಳು ಉದಾಹರಣೆಯನ್ನು ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ. ನೀವು ಇಂದು ಸುಳ್ಳು ಉದಾಹರಣೆಗೆ ಪೂರಕವಾಗುವಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನೀವು ಯಾವುದೇ ಕಾಲದಲ್ಲಿಯೂ ಸಹ ದಾವಾ ಜಮೀನುಗಳಿಗೆ ಹೋಗಿದ್ದಾಗಲಿ, ವಹಿವಾಟಿ ಮಾಡಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಚುಡಿಯಾ ಇವರಿಗೆ ಸಂಬಂಧಪಟ್ಟಿದ್ದು, ಅವರ ನಂತರ ಅವರ ಹೆಂಡತಿ ಮತ್ತು ಮಕ್ಕಳ ಅನುಭವಿಸಿಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ವಾದಿಯರಿಗೆ

ಸಹಾಯ ಮಾಡಲೆಂದು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

4. ನೀವು ಸಲ್ಲಿಸಿದ ಉದಾಹರಣೆ ಮತ್ತು ಪ್ರಮಾಣ ಪತ್ರ ಯಾವ ಭಾಷೆಯಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ನನಗೆ ಓದಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಅದನ್ನು ಓದಿ ತಿಳಿದುಕೊಂಡಿರುತ್ತೀರಾ ಅಥವಾ ಹಾಗೆ ಸಹಿ ಮಾಡಿರುತ್ತೀರಾ ಎಂದರೆ ಸಾಕ್ಷಿಯು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. 5ನೇ ಪ್ರ2ವಾದಿಯು ಅವಿಭಕ್ತ ಕುಟುಂಬದ ಮ್ಯಾನೇಜರ್ ಎಂದು ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿರುತ್ತಾರೆ ಎಂದು ಬರೆಸಿದ್ದು, ಅದರ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ವಕೀಲರಿಗೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನೀವು ಹೇಳುವ ಪ್ರಕಾರ ಕಂದಾಯ ದಾಖಲಾತಿಗಳಲ್ಲಿ 5 ನೇ ಪ್ರತಿವಾದಿಯ ಹೆಸರು ಅವಿಭಕ್ತ ಕುಟುಂಬದ ಮ್ಯಾನೇಜರ್ ಎಂದು ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ಮೊದಲು ಚುಡಿಯಾ ಇವರ ಹೆಸರಿಗೆ ಬಂದಿದ್ದು, ಅವರ ನಂತರ ವಾರಸಾ ನಾತೆಯಿಂದ ಅವರ ಹೆಂಡತಿ ಮತ್ತು ಮಕ್ಕಳಿಗೆ ಬಂದಿರುತ್ತವೆ ಎಂದರೆ ಸರಿಯಲ್ಲ. ನಿಮಗೂ ಹಾಗೂ ದಾವಾ ಆಸ್ತಿಗಳಿಗೂ ಯಾವುದೇ ರೀತಿಯ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ, ನೀವು ದಾವಾ ಆಸ್ತಿಗೆ ಹೋಗಿದ್ದಾಗಲಿ, ಅದರ ಕಬ್ಜಾ ವಹಿವಾಟ ಮಾಡಿದ್ದಾಗಲಿ ಇರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು, ಅಂಕೋಲಾ.